LEGISLATIVE ASSEM

EIGHTEENTH DAY.

Wednesday, 4th April 1951.

The Legislative Assembly met in the Assembly Hall, Old Public Offices, Bangalore, at Five Minutes past Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS.

(to which oral answers were given.)

Mr. SPEAKER (The Hon'ble Sri V. Venkatappa).—Questions. Question No. 216. Sri G. Veerappa.

Steps taken to implement the recommendations of the Economy Officer.

*ಪ್ರಶ್ನೆ 216. ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಡಿಸ್ಟ್ರಿಕ್ಟ್).—

ಈ ಕೆಳಗೆ ಕೇಳಿರುವ ಸಂಗತಿಯನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

ಸರ್ಕಾರದ ಖರ್ಚು ವೆಚ್ಚಗಳನ್ನು ತಗ್ಗಿಸುವ ವಿಚಾರದಲ್ಲಿ ಸಲಹೆ ಹೇಳುವುದಕ್ಕಾಗಿ, ಈ ಸಭೆಯ ಕಳೆದ ಅಧಿವೇಶನವಾದ ಮೇರೆ ಸರ್ಕಾರದವರು ನೇಮಕ ಮಾಡಿದ "ಎಕಾನಮಿ ಆಫೀಸರ್" ಅವರ ಸಲಹೆಗಳನ್ನು ಜಾರಿಗೆ ತರುವುದಕ್ಕಾಗಿ ಸರ್ಕಾರದವರು ಕೈಕೊಂಡಿರತಕ್ಕ ಕಾರ್ಯಕ್ರಮಗಳೇನು ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಶಾಖೆಗಳ ಸೆಚಿವರು).—

ವೆಚ್ಚವನ್ನು ತಗ್ಗಿಸುವುದಕ್ಕಾಗಿ ಕೈಕೊಂಡಿರತಕ್ಕ "ರಿಟ್ರೆಂಚ್‌ಮೆಂಟ್" ಕಾರ್ಯಕ್ರಮಗಳ ವಿವರಗಳ ಪಟ್ಟಿಯನ್ನ ಇದರಡಿ ಕೊಡಲಾಗಿದೆ. ಇನ್ನೂ ಹೆಚ್ಚು ಹುಟ್ಟುವಳಿ ಬರುವಂತೆ ಸಾಧನಗಳನ್ನು ಉತ್ತಮಗೊಳಿಸಿ ಕುದುರಿಸಿಕೊಳ್ಳುವ ವಿಚಾರವು ಪರ್ಯಾಲೋಚನೆಯಲ್ಲಿದೆ.

ಖರ್ಚು ಕೋತಾ ಬಾಬತುಗಳಿಗೆ ಸಂಬಂಧಪಟ್ಟ ವಿವರಗಳ ಪಟ್ಟಿ.

ಇಲಾಖೆ	ಸಾದರುಮಾಡಲ್ಪಟ್ಟಿರುವ ಸರ್ಕಾರದ ನಂಬರು ಮತ್ತು ತಾರೀಖು	ಉಳಿತಾಯವಾಗಿರುವ ಮೊಬಲಗು
ಲ್ಯಾಂಡ್ ರೆವೆನ್ಯೂ ಇಲಾಖೆ ...	1950ನೆಯ ಇಸವಿ ಅಕ್ಟೋಬರ್ 9ನೆಯ ತಾರೀಖಿನ ಆರ್. 7715-26—ಎಲ್. ಆರ್. 312-50-3ನೆಯ ನಂಬರಿನ ಹುಕುಂ.	1,81,517
ಫಾರೆಸ್ಟ್ ಇಲಾಖೆ ...	1950ನೆಯ ಇಸವಿ ಅಕ್ಟೋಬರ್ 14ನೆಯ ತಾರೀಖಿನ ಎ. ಎಫ್. 6026-7—ಫಾರೆಸ್ಟ್ 65-50-2ನೆಯ ನಂಬರಿನ ಸರ್ಕಾರಿ ಹುಕುಂ.	2,25,000
ಎಕ್ಸೈಜು ಇಲಾಖೆ ...	ಉಳಿತಾಯ ಮಾಡಿರುವ ಮೊತ್ತ	3,34,700
ಪೋಲೀಸ್ ಇಲಾಖೆ ...	1950ನೆಯ ಇಸವಿ ಡಿಸೆಂಬರ್ 11ನೆಯ ತಾರೀಖಿನ ಎಚ್. 8526-7—ಪೋಲೀಸು 476-50-1ನೆಯ ನಂಬರಿನ ಸರ್ಕಾರಿ ಹುಕುಂ.	6,17,793
ಪಬ್ಲಿಕ್ ವರ್ಕ್ಸ್ ಇಲಾಖೆ ...	ಪೋಲೀಸ್ ಕಟ್ಟಡಗಳು	1,00,000
ವಿದ್ಯಾಭ್ಯಾಸದ ಇಲಾಖೆ ...	ಮಕ್ಕಳನ್ನು ಒತ್ತಾಯವಾಗಿ ಸ್ಕೂಲಿಗೆ ಕಳುಹಿಸುವುದಕ್ಕೆ ಸಂಬಂಧಪಟ್ಟ ಯೋಜನೆಯನ್ನು ಸ್ವಲ್ಪಮಟ್ಟಿಗೆ ತೆಗೆದುಹಾಕಿದುದರಿಂದ.	2,18,828
ರೇಷ್ಮೆ ವ್ಯವಸಾಯದ ಇಲಾಖೆ	1950ನೆಯ ಇಸವಿ ಅಕ್ಟೋಬರ್ 17ನೆಯ ತಾರೀಖಿನ ಡಿ. 4855—ರೇಷ್ಮೆ ವ್ಯವಸಾಯ 78-50-2ನೆಯ ನಂಬರಿನ ಸರ್ಕಾರಿ ಹುಕುಂ.	49,245
"ಮಾರ್ಕೆಟಿಂಗ್" ಇಲಾಖೆ...	1950ನೆಯ ಇಸವಿ ನವೆಂಬರ್ 12ನೆಯ ತಾರೀಖಿನ ಎ. ಎಫ್. 7066-8—ಮಾರ್ಕೆಟ್ 12-50-4ನೆಯ ನಂಬರಿನ ಸರ್ಕಾರಿ ಹುಕುಂ.	6,756

(ಮಾನ್ಯ ಶ್ರೀ ಎಚ್.ಸಿ. ದಾಸಪ್ಪನವರು).

ಇಲಾಖೆ	ಸಾದರುಮಾಡಲ್ಪಟ್ಟಿರುವ ಸರ್ಕಾರದ ನಂಬರು ಮತ್ತು ತಾರೀಖು	ಉಳಿತಾಯವಾಗಿರುವ ಮೊಬಲಗು
ಗ್ರಾಮಾಭಿವೃದ್ಧಿ ಇಲಾಖೆ ...	1950ನೆಯ ಇಸವಿ ಜುಲೈ 22ನೆಯ ತಾರೀಖಿನ ಎಲ್. ಬಿ. 4279—ವಿ. ಪಿ. 23-50-15ನೆಯ ನಂಬರಿನ ಸರ್ಕಾರಿ ಹುಕುಂ.	3,00,000
	1950ನೆಯ ಇಸವಿ ನವೆಂಬರ್ 4ನೆಯ ತಾರೀಖಿನ ಎಲ್. ಬಿ. 8270-61- ವಿ. ಪಿ. 51-50-1ನೆಯ ನಂಬರಿನ ಸರ್ಕಾರಿ ಹುಕುಂ.	46,152
ಆಹಾರ ನರಬರಾಯಿ ಸಂಬಂಧದ ಇಲಾಖೆ.	ಸಿಬ್ಬಂದಿಯ ಖರ್ಚುವೆಚ್ಚಗಳಲ್ಲಿ ಉಳಿತಾಯ ...	25,980
ವ್ಯವಸಾಯದ ಕಾಲೇಜೂ ಸೇರಿ ವ್ಯವಸಾಯದ ಇಲಾಖೆ.	1951ನೆಯ ಇಸವಿ ಫೆಬ್ರವರಿ 2ನೆಯ ತಾರೀಖಿನ ಎ. ಎಫ್. 9216-7—ವ್ಯವಸಾಯ 121-50-3ನೆಯ ನಂಬರಿನ ಸರ್ಕಾರಿ ಹುಕುಂ.	1,39,487
ಸರ್ಕಾರಿ ಉದ್ಯಾನಗಳ ಇಲಾಖೆ	1951ನೆಯ ಇಸವಿ ಫೆಬ್ರವರಿ 23ನೆಯ ತಾರೀಖಿನ ಎ. ಎಫ್. 9805-6—ಜಿ. ಜಿ. 53-50-2ನೆಯ ನಂಬರಿನ ಸರ್ಕಾರಿ ಹುಕುಂ.	8,712
ಪಶುಪೋಷಣೆ ಇಲಾಖೆ ...	1951ನೆಯ ಇಸವಿ ಮಾರ್ಚ್ 5ನೆಯ ತಾರೀಖಿನ ಎ. ಎಫ್. 10158 62—ಎ. ಎಚ್. 123-50-2ನೆಯ ನಂಬರಿನ ಸರ್ಕಾರಿ ಹುಕುಂ.	3,12,361
	ಒಟ್ಟು ...	25,69,531

ಶ್ರೀ ಜಿ. ವೀರಪ್ಪನವರು.—ಇಲ್ಲ ಖರ್ಚು ಕಡಿಮೆ ಮಾಡಿರುವ ಬಾಬುಗಳನ್ನು ತಿಳಿಸಿದ್ದೀರಿ. ಇದೆಲ್ಲಾ ಎಕಾನಮಿ ಆಫೀಸರ ಪ್ರಪೋಸಲ್ ಅನುಸರಿಸಿ ತಾನೆ ಮಾಡಿರುವುದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಕಾನಮಿ ಆಫೀಸರನ್ನು ನೇಮಕ ಮಾಡಿದ್ದೇ ಆ ಉದ್ದೇಶಕ್ಕೆ, ಅ ರ ವರದಿಯನ್ನು ಮುಖ್ಯವಾದ ಆಧಾರವಾಗಿಟ್ಟುಕೊಂಡು ಈ ಖರ್ಚೆಲ್ಲಾ ಕಡಿಮೆ ಮಾಡಿದೆ.

ಶ್ರೀ ಜಿ. ವೀರಪ್ಪನವರು.—ತಪಶೀಲು ಕೊಟ್ಟಿದ್ದೀರಿ. ಪೋಲೀಸ್ ಬಾಬಿನಲ್ಲಿ 6,17,793 ರೂಪಾಯಿ ಯಾವ ರೀತಿ ಕಡಿಮೆಯಾಗಿದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇನ್ನೊಂದು ಪ್ರಶ್ನೆಯ ಸಂಬಂಧದಲ್ಲಿ ಅದನ್ನು ಟೇಬಲ್ ಮೇಲೆ ಇಡಲಾಗಿದೆ. ಮಾನ್ಯ ಸದಸ್ಯರು ನೋಡಬಹುದು.

ಶ್ರೀ ಜಿ. ವೀರಪ್ಪನವರು.—ಅಮ್ಮು ಕಡಿಮೆಯಾಗಿರುವುದು ಸಿಬ್ಬಂದಿಗೆ ಕಡಿಮೆಯಾಗಿಯೇ ಅಥವಾ ಯಾವುದಕ್ಕೆ ಕಡಿಮೆಯಾಗಿದೆ ಎಂದು ಹೇಳಿದರೆ ಸಾಕು.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಟೇಬಲ್ ಮೇಲೆ ಇಟ್ಟಿದೆ. All the information is contained in the answer to the other question.

ಶ್ರೀ ಜಿ. ವೀರಪ್ಪನವರು.—ಇದೇ ರೀತಿ ರೂರಲ್ ಡೆವಲಪ್‌ಮೆಂಟ್‌ಗೆ 3 ಲಕ್ಷ ರೂಪಾಯಿ ಕಡಿಮೆಯಾಗಿದೆ ಎಂದು ಹೇಳಿದ್ದೀರಿ ಅದನ್ನು ಯಾವ ರೀತಿಯಾಗಿ ಮಾಡಿದ್ದೀರಿ ?

The Hon'ble Sri H. C. DASAPPA.—The same answer. How can I give details ? ಅದೆಲ್ಲಾ ಹಿಂದಿನ ಪ್ರಶ್ನೆಗೆ ಉತ್ತರವಾಗಿ ಟೇಬಲ್ ಮೇಲೆ ಇಟ್ಟಿದೆ. ನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ. ವೀರಪ್ಪನವರು.—ಆ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆ ಕಡಿಮೆ ಮಾಡಿದ್ದೀರಾ ಅಥವಾ ಬೇರೆ ಯಾವುದಾದರೂ ಖರ್ಚು ಕಡಿಮೆ ಮಾಡಿದ್ದೀರಾ ಅಂತ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅಧಿಕಾರಿಗಳ ಸಂಖ್ಯೆ, ಸಿಬ್ಬಂದಿ ಇವೆಲ್ಲಾ ಕಡಮೆಯಾಗಿದೆ.

ಶ್ರೀ ಜಿ. ವೀರಪ್ಪನವರು.—ರ್ಯಾಂಡ್ ರೆವಿನ್ಯೂನಲ್ಲಿ 1,84,51[illegible] ರೂಪಾಯಿ ಕಡಿಮೆಮಾಡಿದ್ದೀರಿ. ಅದರಲ್ಲಿ ಯಾವರೀತಿ ಆಗಿದೆ ?

The Hon'ble Sri H. C. DASAPPA.—Same answer for all the departments. I can pass on every bit of the details to the Hon'ble Member. We need not take the whole time of the House on them now. Whatever information the Hon'ble Member wants for Rs. 25,000 is contained in the file here.

Sri G. VEERAPPA.—Will the Government be pleased to state whether they have taken any steps to increase the revenues of the State ?

The Hon'ble Sri H. C. DASAPPA.—All those proposals for the increase of revenue have come up before the Legislature.

Sri G. VEERAPPA.—Apart from the taxation measures, are there any other measures which the Government have thought of for increasing the revenue of the State?

The Hon'ble Sri H. C. DASAPPA.—It is a continuous effort. We are trying to step up production, earn better in the case of some of these industrial concerns, transport, electricity and so on.

Sri G. VEERAPPA.—Is it not a fact that in spite of these measures, we have got a top-heavy administration?

The Hon'ble Sri H. C. DASAPPA.—I do not think it is really top-heavy. I quite concede that there may be room for further retrenchment. I cannot say it is top-heavy.

Sri G. VEERAPPA.—So, shall I take it that further measures of retrenchment will be taken up?

The Hon'ble Sri H. C. DASAPPA.—I have already answered that in connection with another question. It is a continuous process.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಪೋಲೀಸ್ ಇಲಾಖೆಯಲ್ಲಿ ಖೋತಾ ಮಾಡಿದ್ದೀರಿ. ಈಗಿನ ಪರಿಸ್ಥಿತಿಯಲ್ಲಿ ಈಗ ನಮಗಿರತಕ್ಕ ಪೋಲೀಸ್ ಶಿಬ್ಬಂದಿ law and order ಕಾಪಾಡಲಿಕ್ಕೆ ಸಾಕಷ್ಟಿದೆ ಎಂದು ಸರ್ಕಾರದವರ ಅಭಿಪ್ರಾಯವೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಖೋತಾ ಮಾಡಬೇಕಾದರೆ ಭದ್ರತೆಗೆ ನ್ಯೂನತೆ ಬರುವ ರೀತಿಯಲ್ಲಿ ಖೋತಾ ಮಾಡಿಲ್ಲ. ಅದನ್ನು ದೃಷ್ಟಿಯಲ್ಲಿಟ್ಟು ಕೊಂಡು ಖೋತಾ ಮಾಡಿದೆ. ಬಡ್ಜೆಟ್‌ನಲ್ಲಿ ತಾವು ನೋಡಿರಬಹುದು. ಇದಕ್ಕೆ ಈ ಸಲ ಹೆಚ್ಚಾಗಿ ಒದಗಿಸಿದೆ. ರಿಟ್ರೆಂಚ್‌ಮೆಂಟ್ ಆಗಿದ್ದರೂ ಕೂಡ ಕೆಲವು ಸಂದರ್ಭಗಳಲ್ಲಿ ವಿಶೇಷ ಪರಿಸ್ಥಿತಿ ಉಂಟಾದುದರ ದೆಶೆಯಿಂದ ಹೆಚ್ಚು ಹಣ ಒದಗಿಸಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಖೋತಾ ಮಾಡಿರುವುದಕ್ಕಿಂತಲೂ, ಕೊಟ್ಟಿರುವುದು ಹೆಚ್ಚಾಗಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬೇರೆ ಸಂದರ್ಭದಲ್ಲಿ ಹೆಚ್ಚಾಗಿದೆ.

Sri Kadidal MANJAPPA (Shimoga District—General).—Is there any State which spends more than half the income over the salaries of Government servants?

Mr. SPEAKER.—How does that supplementary arise?

The Hon'ble Sri H. C. DASAPPA.—That is a matter of research and study.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ರಿಟ್ರೆಂಚ್‌ಮೆಂಟಿಗೆ ಸಂಬಂಧಪಟ್ಟ ಸಲಹೆಗಳಲ್ಲಿ ಅಧಿಕಾರಿಗಳನ್ನು ಆಗಾಗ ವರ್ಗ ಮಾಡಬಾರದೆಂಬುದೂ ಒಂದು ಸಲಹೆ ಇದೆಯಲ್ಲವೆ?

The Hon'ble Sri H. C. DASAPPA.—That may be, Sir. But that forms a very small portion of the total expenditure.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸರ್ಕಾರದವರು ಈ ಶಿಫಾರಸನ್ನು ಅನುಸರಿಸಿದ್ದಾರೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆದಷ್ಟು ಮಟ್ಟಿಗೆ ಅನುಸರಿಸುವುದಕ್ಕೆ ಪ್ರಯತ್ನಪಡುತ್ತಾರೆ. ಆದರೆ it all depends upon exigencies of circumstances. ಕೆಲವು ಸಂದರ್ಭಗಳಲ್ಲಿ more frequent transfers than may be desirable are also possible.

ಶ್ರೀ ಎಂ. ಗೋವಿಂದರೆಡ್ಡಿಯವರು.—ಸ್ಪೆಷಲ್ ಅಲೋಯನ್ಸುಗಳನ್ನು ಕೊಡುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕೆಂಬುದೂ ಒಂದು ಶಿಫಾರಸಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ನೀತಿಯೇನೋ ಸರಿ, ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಕೊಡಬೇಕಾಗುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದನ್ನು ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲವನ್ನೂ ತೆಗೆದುಹಾಕುವ ನೀತಿಯನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅಧಿಕಾರಿಗಳಿಗೆ ಜವಾನರನ್ನು ಕೊಡುವುದನ್ನೂ ಆದಷ್ಟು ಕಡಿಮೆ ಮಾಡಬೇಕೆಂಬುದೂ ಒಂದು ಶಿಫಾರಸಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗಾಗಲೇ ಇದನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅಧಿಕಾರಿಗಳ ಪ್ರಯಾಣ ಭತ್ಯವನ್ನು ಕಡಿಮೆಮಾಡಬೇಕೆಂಬುದೂ ಒಂದು ಸಲಹೆಯಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಸಂದರ್ಭಗಳಲ್ಲಿ ಕಡಿಮೆ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದನ್ನು ಅನುಸರಿಸಿದ್ದೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಷ್ಟು ಸಾಧ್ಯವೋ ಅಷ್ಟು ಅನುಸರಿಸುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಪೋಲೀಸ್ ಇಲಾಖೆಯಲ್ಲಿ 6,17,793 ರೂಪಾಯಿ ಖರ್ಚು ಕಡಿಮೆಯಾಗಿ ತೋರಿಸಿದ್ದಾರೆ, ಈ ಸಾರಿಯ ಬಡ್ಜೆಟ್ಟಿನಲ್ಲಿ ಹೋದ ವರ್ಷಕ್ಕಿಂತ ಎಷ್ಟು ಕಡಿಮೆ ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಬಡ್ಜೆಟ್ಟು ತಮ್ಮ ಎದುರಿಗೇ ಇದೆ, ಅದರೂ ನಮ್ಮನ್ನೇಕೆ ಕೇಳುವುದು?

ಶ್ರೀ ಬಿ. ಹುಚ್ಚೇಗೌಡರು.—ಗ್ರಾಮಾಭಿವೃದ್ಧಿ ಇಲಾಖೆಯಲ್ಲಿ ಮೂರುಲಕ್ಷ ರೂಪಾಯಿ ಕಡಿಮೆ ಮಾಡಲಾಗಿದೆ, ಎಕಾನಮಿ ಅಧಿಕಾರಿಗಳ ಶಿಫಾರಸಿನಲ್ಲಿ ಈ ಸಲಹೆ ಇದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದೂ ಸೇರಿರಬೇಕು.

ಶ್ರೀ ಬಿ. ಹುಚ್ಚೇಗೌಡರು.—ಆ ಅಧಿಕಾರಿಗಳು ತಮ್ಮ ಶಿಫಾರಸುಗಳನ್ನು ಮಾಡಿದಾಗ ಈ ಗ್ರಾಮಾಭಿವೃದ್ಧಿ ಇರಾಖೆಯೇ ಇರಲಿಲ್ಲವಲ್ಲ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆದರೆ, ಬಾವಿಗಳು, ಗ್ರಾಮಾಂತರ ರಸ್ತೆಗಳು ಇವೆಲ್ಲಾ ಇದ್ದವು.

ಶ್ರೀ ಬಿ. ಹುಚ್ಚೇಗೌಡರು.—ಪಶುಪೋಷಣೆ ಇರಾಖೆಯಲ್ಲಿ 3,12,361 ರೂಪಾಯಿ ಕಡಿಮೆ ಮಾಡಲಾಗಿದೆಯೆಂದು ತಿಳಿಸಿದ್ದೀರಿ, ಇದರಿಂದ ದೇಶಾಭ್ಯುದಯ ಕಾರ್ಯ ಕಡಿಮೆಯಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಅಭಿಪ್ರಾಯ.

Investment on Bhadravathi Iron and Steel Works, its working and management.

*ಪ್ರಶ್ನೆ 212.—ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಡಿಸ್ಟ್ರಿಕ್ಟ್.)—

ಪ್ರಶ್ನೆ. ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಾಗಿ ಸರ್ಕಾರದವರು ಹಾಕಿರತಕ್ಕ ಒಟ್ಟು ಮೊಬಲಗೆಷ್ಟು ;

(b) ಈ ಕಾರ್ಖಾನೆ ಲಾಭದಾಯಕವಾಗಿ ನಡೆಯುತ್ತಿದೆಯೆ ; ಹಾಗೆ ನಡೆಯುತ್ತಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಬಂದಿರುವ ನಿವ್ವಳ ಲಾಭಗಳೇನು ;

(c) ಕಾರ್ಖಾನೆಯ ಆಡಳಿತದ ವಿಷಯದಲ್ಲಿ ಸರ್ಕಾರದವರಿಗಿರತಕ್ಕ ಅಧಿಕಾರಗಳು ಮತ್ತು ಹೆಚ್ಚೂ ಏನು ; ಒಟ್ಟು ಉತ್ಪತ್ತಿಯಾಗುವ ಕಬ್ಬಿಣ ಮತ್ತು ಉಕ್ಕಿನ ಮೇಲೆ ಸರ್ಕಾರದವರ ಅಧಿಕಾರ ಮತ್ತು ಹೆಚ್ಚೂ ಏನು ; ಇಂಡಿಯಾ ಸರ್ಕಾರದವರು ಈ ಕಾರ್ಖಾನೆಯ ಮೇಲೆ ಎಷ್ಟರಮಟ್ಟಿಗೆ ಮತ್ತು ಯಾವ ವಿಧವಾದ ಹತೋಟಿಯನ್ನು ಹೊಂದಿದ್ದಾರೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕೆ ಶಾಖೆಗಳ ಸಚಿವರು).—

(a) 1950ನೆಯ ಇಸವಿ ಸೆಪ್ಟೆಂಬರ್ 30ನೆಯ ತಾರೀಖಿನ ಲೆಕ್ಕಗಳ ಆಧಾರದ ಮೇರೆ—

		ಲಕ್ಷ ರೂಪಾಯಿಗಳು
ಬಂಡವಾಳದ ಪೆಟ್ಟಿ	...	405.71
ಕೆಲಸ ನಡೆಯಿಸುವುದಕ್ಕಾಗಿ ಕೊಟ್ಟಿರುವ ಮುಂಗಡ	...	40.51
ಒಟ್ಟು	...	446.22

(b) ಹಾದು.

		ಲಕ್ಷ ರೂಪಾಯಿಗಳು
1947-48ನೆಯ ಸಾಲಿನಲ್ಲಿ	...	11.06
1948-49 ,,	...	13.10
1949-50 ,,	...	5.05

(c) ಕಾರ್ಖಾನೆಯ ಆಡಳಿತವನ್ನು ಆಡಳಿತ ನಿರ್ವಹಣದ ಒಂದು ಬೋರ್ಡಿನವರಿಗೆ ("ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್"ನವರಿಗೆ) ವಹಿಸಿಕೊಡರಾಗಿದೆ. ಈ ಆಡಳಿತ ನಿರ್ವಹಕ ಬೋರ್ಡು ಸರ್ಕಾರದವರ ಹತೋಟಿಗೊಳಪಟ್ಟಿದೆ. ಕಾರ್ಖಾನೆಯಲ್ಲಿ ತಯಾರಾಗುವ ಎಲ್ಲಾ ಉಕ್ಕನ್ನೂ ಇಂಡಿಯಾ ಸರ್ಕಾರದವರು "ಕಾಮರ್ಷ್ ಪೂರ್" ಶೇಖರಣೆಗೆ ತೆಗೆದುಕೊಂಡು, ಹಂಚಿಕೆಗಾಗಿ ಅದನ್ನು ತಮ್ಮ "ಐರ್ಸ್ ಅಂಡ್ ಸ್ಟೀಲ್ ಕಂಟ್ರೋಲರ್" ಅವರ ವಶಕ್ಕೆ ಒಪ್ಪಿಸುತ್ತಾರೆ. ಕಾರ್ಖಾನೆಯ ವಿಷಯದಲ್ಲಿ ಇಂಡಿಯಾ ಸರ್ಕಾರದವರು ಬೇರೆ ಯಾವ ಹತೋಟಿ, ಅಧಿಕಾರಗಳನ್ನೂ ಚಲಾಯಿಸುತ್ತಿಲ್ಲ.

ಶ್ರೀ ಜಿ. ವೀರಪ್ಪನವರು.—ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಾಗಿ ಸರ್ಕಾರದವರು ಹಾಕಿರತಕ್ಕ ಒಟ್ಟು ಮೊಬಲಗೆಷ್ಟು, ಎಂಬುದಕ್ಕೆ ಇಲ್ಲಿ 405.71 ಲಕ್ಷ ರೂಪಾಯಿ ಎಂದು ತಿಳಿಸಲಾಗಿದೆ, Shall I take it that it is the full investment from the very beginning of these works ?

The Hon'ble Sri H. C. DASAPPA.—Yes.

ಶ್ರೀ ಜಿ. ವೀರಪ್ಪನವರು.—ಈ working advance ಎಂದರೇನು, ಇದನ್ನೇಕೆ ಕೊಡುವುದು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇದನ್ನು ಕೊಟ್ಟೇಕೆಂಡಬೇಕು. ಯಾವುದೇ ಒಂದು ಕಂಪೆನಿಯಾದರೂ fixed capital ಅಲ್ಲದೆ raw materials ಮುಂತಾದ್ದನ್ನು ತೆಗೆದುಕೊಳ್ಳಬೇಕಾಗುತ್ತದೆ, ಇದಕ್ಕಾಗಿ working advance ಕೊಡಬೇಕು. ಇದಿಲ್ಲದಿದ್ದರೆ ಯಾವುದೂ ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಿ. ವೀರಪ್ಪನವರು.—ಇದರಿಂದ ಬರುತ್ತಿರುವ ಲಾಭವನ್ನು ತೋರಿಸಲು ಮೂರು ವರ್ಷಗಳ ಅಂಕಿಗಳನ್ನು ಕೊಡಲಾಗಿದೆ. 1947-48 ರಲ್ಲಿ 11.06 ಲಕ್ಷ ರೂಪಾಯಿ ಬಂದಿದೆ, 1948-49 ರಲ್ಲಿ 13.10 ಲಕ್ಷ ಬಂದಿದೆ. ಇದು 1949-50 ರಲ್ಲಿ 5 ಲಕ್ಷಕ್ಕೆ ಇಳಿದಿದೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ವರ್ಷದಲ್ಲಿ 9 ತಿಂಗಳ ಲೆಕ್ಕ ಮಾತ್ರ ಕೊಟ್ಟಿದೆ ಏಕೆಂದರೆ ಬ್ಲಾಸ್ಟ್ ಫರ್‌ನೇಸ್ shut down ಆಯಿತು, ಆಗ ಕೆಲಸ ನಿಂತುಹೋಯಿತು. ಇದೇ ಮುಖ್ಯ ಕಾರಣ.

ಶ್ರೀ ಜಿ. ವೀರಪ್ಪನವರು.—ಈ ಲಾಭ ಬಂದಿರುವ ಅಂಕಿಗಳನ್ನು ಕೊಡಬೇಕಾದರೆ, ಈ ಕಾರ್ಖಾನೆಗೆ ನರ ಬರಾಯಾಗುವ ಸಾದೆ ಇದ್ದಲಿನ ಬೆಲೆಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಎಲ್ಲವೂ ಸೇರಿದೆ.

Sri G. VEERAPPA.—What is the rate at which you procure fuel for the Works ?

The Hon'ble Sri H. C. DASAPPA.—I want notice. I am sorry that for a detailed question like this, namely, what is the expense incurred in connection with fuel supply to the Bhadravathi Iron and Steel Works, answers cannot be given without notice. Probably the Budget figures will show the details.